O.S. No- 200/2021

PW-1

<u>ದಿನಾಂಕಃ 06.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**ಪಾಟಿ ಸವಾಲುಃ ಶ್ರೀ. ಡಿ.ಎಮ್.ಜೆ.1 ಮತ್ತು 2 ನೇ ಪ್ರತಿವಾದಿಯರ ಪರ ವಕೀಲರಿಂದಃ** ದಾವಾ ಆಸ್ತಿಗಳ ಸರ್ವೇ ನಂಬರ 104 ಇರುತ್ತದೆ. ಇದರ ಒಟ್ಟು ವಿಸ್ತೀರ್ಣ 17 ಎಕರೆ 27 ಗುಂಟೆ ಇರುತ್ತದೆ. ಇದರಲ್ಲಿ 7 ಹಿಸ್ಸಾ ಇರುತ್ತದೆ. ಸರ್ವೇ ನಂಬರ 104/2 ಇದು ಸಾಂಗ್ಲಿಕರ್ ಇವರ ಕರೆಯಿಂದ 1981-82 ರಲ್ಲಿ ಖರೀದಿಸಿರುತ್ತೇನೆ. ಖರೀದಿ ಪತ್ರ ಹಾಜರುಪಡಿಸಿದ್ದೇನೆ. 2 ಪಟ್ಟಿ ಖೇರಿದಿಸಿರುತ್ತೇನೆ. 1 ಮತ್ತು 2 ನೇ ಪ್ರತಿವಾದಿಯರ ಆಸ್ತಿ ಸಂಖ್ಯೆ 104/4 ಇರುತ್ತದೆ. ಅವರು ಈ ಆಸ್ತಿಯನ್ನು ಖರೀದಿಸಿರುತ್ತಾರೆ. ಆದರೆ ಯಾರ ಕಡೆಯಿಂದ ಖರೀದಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅವರು ಸದರಿ ಆಸ್ತಿಯನ್ನು 1973 ರಲ್ಲಿ ಖರೀದಿಸಿರುತ್ತಾರೆ. ದಾವಾ ಆಸ್ತಿಯಲ್ಲಿ ನಮಗೆ ಮತ್ತು ಅವರಿಗೆ ನಡುವೆ ದೊಡ್ಡ ದೊಡ್ಡ ಸೀಮೆ (ಬೌಂಡ್ರಿ) ಕಲ್ಲು ಇದೆ. ಈಗಲೂ ಸಹ ಆ ಕಲ್ಲು ಇವೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಆಸ್ತಿ ಪೂರ್ವಕ್ಕೆ ಬರುತ್ತದೆ, ನಮ್ಮ ಆಸ್ತಿ ಪಶ್ಚಿಮಕ್ಕೆ ಬರುತ್ತದೆ ಎಂದರೆ ಸರಿ.

ನಮ್ಮ ನಡುವೆ ಸೀಮೆ ತಕರಾರು ಇದೆ ಎಂದರೆ ಸರಿ. ಸೀಮೆ ಕಲ್ಲು ಎಲ್ಲಿ ಬರಬೇಕು ಎಂದು ಮೋಜನಿ ಮಾಡಬೇಕಾಗುತ್ತದೆ ಎಂದರೆ ಸರಿ. ಸಾಕ್ಷಿಗೆ ಪಿ.ಟಿ. ಶೀಟ್ ನಕ್ಷೆಯನ್ನು ತೋರಿಸಲಾಗಿ ಅದು ಸರಿಯಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯರ ಜಮೀನಿನಲ್ಲಿ ತೆಂಗಿನ ಗಿಡಗಳು ಇವೆ ಎಂದರೆ ಸರಿ. ಸಾಕ್ಷಿಗೆ ಫೋಟೋ ತೋರಿಸಲಾಗಿ ಅದರಲ್ಲಿ ನನ್ನ ಮನೆ ಹಾಗೂ ಪ್ರತಿವಾದಿಯ ಮನೆ ಇದೆ ಎಂದರೆ ಸರಿ. ಸದರಿ ಫೋಟೋವನ್ನು ಭಾ.ಸಾ. ಅಧಿನಿಯಮ 63(4) ರಡಿಯಲ್ಲಿ ಪ್ರಮಾಣ ಪತ್ರ ಸಲ್ಲಿಸುವ ಷರತ್ತಿನೊಂದಿಗೆ ಸದರಿ ಫೋಟೋವನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಫೋಟೋ ತೋರಿಸಲಾಗಿ ಅದರಲ್ಲಿ ಕಲ್ಲುಗಳು ಇವೆ ಎಂದರೆ ಧ್ರಾಕ್ಷಿ ಕಲ್ಲುಗಳು ಎಂದು ನುಡಿದಿರುತ್ತಾರೆ. ಸಾಕ್ಷಿಗೆ ಇನ್ನೊಂದು ಫೋಟೋ ತೋರಿಸಲಾಗಿ ಅದರಲ್ಲಿ ಕಲ್ಲುಕುಟ್ಟರಿ ಅದರ ಪಕ್ಕದಲ್ಲಿ ರಸ್ತೆ ಇದೆ ಎಂದರೆ ಹೌದು ಎಂದು ನುಡಿಯುತ್ತಾರೆ. ಸದರಿ ಫೋಟೋವನ್ನು ಭಾ.ಸಾ. ಅಧಿನಿಯಮ 63(4) ರಡಿಯಲ್ಲಿ ಪ್ರಮಾಣ ಪತ್ರ ಸಲ್ಲಿಸುವ ಷರತ್ತಿನೊಂದಿಗೆ ಸದರಿ ಫೋಟೋವನ್ನು ನಿಡಿ-2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಫೋಟೋ ತೋರಿಸಲಾಗಿ ಅದರಲ್ಲಿ ಪ್ರತಿವಾದಿಯರು ತಮ್ಮ ಆಸ್ತಿಗೆ ತಂತಿ ಬೇಲಿ ಹಾಕಿದ್ದಾರೆ ಎಂದರೆ ಹೌದು ಎಂದು ನುಡಿಯುತ್ತಾರೆ.

1997 ರಲ್ಲಿ ಸರ್ಕಾರಿ ಮೋಜನಿ ಮಾಡಿಸಿದ್ದೆವೆ. ಇದಕ್ಕೆ ಸಂಬಂಧಿಸಿದಂತೆ ಪ್ರತಿವಾದಿಯರಿಗೆ ನೋಟೀಸು ನೀಡಿದ್ದೇವೆ. ಈ ಮಾತ್ತು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ವಿಷಯ ತಿಳಿದ ನಂತರ ಡಿಡಿ ಎಲ್ ಆರ್ ಇವರ ಮುಂದೆ ಅಪೀಲು ಸಲ್ಲಿಸಿದ್ದರು ಎಂದರೆ ಸರಿ. ಡಿಡಿಎಲ್ ಆರ್ ಇವರು ಎಡಿಎಲ್ ಆರ್ ಇವರಿಗೆ ಸ್ಥಳ ಪರೀಶೀಲಿಸಿ ವರದಿನೀಡಲು ನಿರ್ದೇಶಿಸಿದ್ದರು ಎಂದರೆ ಸರಿ. ಅದರಂತೆ ಎಡಿಎಲ್ ಆರ್ ಇವರು ಸ್ಥಳ ಪರಿಶೀಲನೆ ಮಾಡಿದ್ದರು ಎಂದರೆ ಸರಿ. ಎಡಿಎಲ್ ಆರ್ ಇವರು ಮಾಡಿರುವ ಸ್ಥಳ ಪರಿಶೀಲನೆ ಮಾಡಿ ತಯಾರಿಸಿದ ಪಿ ಟಿ ಶೀಟ್ ಮೇಲೆ ನಾನು ಅಪೀಲು ಸಲ್ಲಿಸಿದ್ದೇನೆ. ಎರಡೂ ಪಕ್ಷಗಾರರ ಒಪ್ಪಿಗೆ ಮೇರೆಗೆ ಪರಿಶೀಲನೆ ಮಾಡಬೇಕು ಎಂದು ಆದೇಶ ಮಾಡಿರುತ್ತಾರೆ. ಎಡಿಎಲ್ ಆರ್ ಅವರು ಸ್ಥಳಕ್ಕೆ ಪರಿಶೀಲನಗೆ ಬಂದಾಗ ನಾನು ಸಹಿ ಮಾಡಿರುತ್ತೇನೆ. ಬೆಳಗಾವಿಯ ಜೆ ಡಿ ಎಲ್ ಆರ್ ಇವರ ಮುಂದೆ ಅಪೀಲು ಸಲ್ಲಿಸಿದ್ದೀರಾ ಎಂದರೆ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಖರೀದಿ ಪತ್ರ ಹಾಗೂ ಇತರ ದಾಖಲೆಗಳನ್ನು ಪರಿಶೀಲನೆ ಮಾಡಿ ಪಿ.ಟಿ. ಶೀಟ್ ತಯಾರಿಸಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ದಾವೆಯನ್ನು ಮಾಡುವ ಯಾವುದೇ ಕಾರಣ ಇರದೇ ಇದ್ದರೂ ಕೂಡ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಪಕ್ಕದ ಜಮೀನನ್ನು ಅತಿಕ್ರಮ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯ ನೀಡಿ ಪಾಟೀ ಸವಾಲನ್ನು ಮುದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

ಸಹಿ/-

ಹೆಚ್ಚುವರಿ ದಿವಾಣಿ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು ಜಮಖಂಡಿ.